# ಹೊಸ ವರ್ಷದ ಹೊಸ ಬೆಳಕು

■ **ಲಲಿತಾ ಹೊಸಪ್ಯಾಟಿ**
ಸಂತೋಷ್ ಸಸಿಹಿತ್ಲು

ಚುಮ್ ಚುಮ್ಚುಮ್ ನಸುಕು ಸರಿದು
ಬೆಳಗು ಮೂಡಿತ್ತು
ಮೋಡದ ಮರೆಯ ಮುಸುಕು ಹರಿದು
ಹೊಸ ವರ್ಷ ಘಮಿಸಿತ್ತು

ವಟರ್ ವಟರ್ ವಟರ್ ಕಪ್ಪೆ
ತಾಳ ಹಾಕಿತ್ತು
ಇನಿದನಿಯಲ್ಲಿ ಕೋಗಿಲೆ ಹಾಡು
ಕಿವಿಗೆ ಹಿತವಿತ್ತು

ಬರ್ ಬರ್ ಬರ್ಬರ್ ಬೀಸು ತಂಗಾಳಿಗೆ
ಎಲೆಗಳು ಅದುರಿತ್ತು
ಹಿರಿ ಹಿರಿ ಹಿಗ್ಗಿ ಹೂವಿನ ಸಮೇತ
ದುಂಬಿ ನೆರೆದಿತ್ತು

ಗುರ್ ಗುರ್ ಗುರ್ಗುರ್ ನಿದ್ದೆ ಮಾಡುವ
ಹುಲಿಯು ಎದ್ದಿತ್ತು
ಮುಖವನು ನೆಕ್ಕಿದ ಬಾಲ ಹೆಕ್ಕಿದ
ಬೆಕ್ಕಿಗೆ ಅಪ್ಪಿತ್ತು

ಗಿಲ್ ಗಿಲ್ ಗಿಲ್ಗಿಲ್ ಗೆಜ್ಜೆ ಹೆಜ್ಜೆ
ಕರಡಿ ಕುಣಿದಿತ್ತು
ತಾಜಾ ಜೇನು ನೇರಳೆ ಹಣ್ಣು
ಹಂಚಲು ತಂದಿತ್ತು

ಬರ್ ಬರ್ ಬರ್ಬರ್ ನದಿಬದಿಯಿಂದ
ಮೊಸಳೆ ಬಂದಿತ್ತು
ಹೆಗಲಲಿ ಹೊತ್ತ ಬಾಳೆ ಗೊನೆಯನು
ಕೋತಿ ಇಳಿಸಿತ್ತು

ಟಣ್ ಟಣ್ ಟಣ್ಟಣ್ ಮುದ್ದಿನ ಮೊಲ
ನಗು ನಗುತಾ ಚಂದಿತ್ತು
ಕೇದಗಿ ವನದಲಿ ಧ್ಯಾನದಿ ಮಲಗಿದ
ಹಾವು ಜೊತೆಯಾತು

ಕಣ್ ಕಣ್ ಕಣ್ಕಣ್ ಪಿಳಿಕಿಸಿಕೊಂಡು
ಆನೆ ಒಂಟಿ ನಿಂತಿತ್ತು
ಕತ್ತೆ ಕುದುರೆ ಜಿಂಕೆ ಚಿರತೆ
ಭೇದ ಮರೆತಿತ್ತು

ಪುರ್ ಪುರ್ ಪುರ್ಪುರ್ ಹಾರುತ ಹಾರುತ
ಗಿಣಿ ಗೊರವಂಕ ಬಂದಿತ್ತು
ಗೊರಕೆ ಹೊಡೆವ ಗೂಬೆ ಬಾವಲಿ
ನಿದ್ದೆ ಮರೆತಿತ್ತು

ಸವಿ ಸವಿ ಸವ್ಸವಿ ಕಬ್ಬು ಹಲಸು
ಹಸಿಗಡಲೆಯು ತಿನಲಿತ್ತು
ಉಪ್ಪು ಮೆಣಸು ಬೆಲ್ಲ ಹುಳಿಬೆರೆಸಿದ
ಪಾನಕ ರುಚಿಯಿತ್ತು

ಗಪ್ ಚಿಪ್ ಗಪ್ಚಿಪ್ ಬೆಟ್ಟ ಹತ್ತಿದ
ಸಿಂಹದ ಸವಿ ಮಾತು
ಬೋಳೆ ಗುಣದ ಸಾಧು ಪ್ರಾಣಿಗೆ
ತಾರೆನು ಆಪತ್ತು

ಕರ್ ಬರ್ ಕರ್ಬರ್ ಕದನ ತೊರೆದು
ನೇಹವ ತೋರೋಣ
ಕಾಡಲಿ ಗೂಡಲಿ ಗವಿಯಲಿ ಗೆಳೆಯರೆ
ಒಟ್ಟೊಟ್ಟಿಗೆ ಬದುಕೋಣ

